PW : 1

# ಪ್ರಧಾನ ಹಿರಿಯ ವ್ಯವಹಾರಿಕ ನ್ಯಾಯಾಧೀಶರು ಮತ್ತು ಹೆಚ್ಚುವರಿ ಮುಖ್ಯ ನ್ಯಾಯಿಕ ದಂಡಾಧಿಕಾರಿಯವರ ನ್ಯಾಯಾಲಯ, ಪುತ್ತೂರು, ದ.ಕ

## **Misc No**. 4/2025

ದಿನಾಂಕಃ 09.04.2026 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು

**ಪಾಟಿಸವಾಲು 1 ನೇ ಎದುರುದಾರರ ಪರ ಶ್ರೀ K.N.S. ವಕೀಲರಿಂದಃ**

ನಾನು MSC B.Ed. ಮುಗಿಸಿರುತ್ತೇನೆ. MSC ಯನ್ನು 2019 ರಲ್ಲಿ ಮತ್ತು B.Ed.ಯನ್ನು 2023 ರಲ್ಲಿ ಮುಗಿಸಿರುತ್ತೇನೆ. ಸದರಿ ವಿದ್ಯಾಭ್ಯಾಸದ ಖರ್ಚನ್ನು ನನ್ನ ಗಂಡ ನೋಡಿಕೊಂಡಿರುತ್ತಾರೆ. ಅದಕ್ಕಿಂತ ಮೊದಲಿನ ವಿದ್ಯಾಭ್ಯಾಸದ ಖರ್ಚನ್ನು ನನ್ನ ಸಂಬಂಧಿಕರು ನೋಡಿಕೊಂಡಿರುತ್ತಾರೆ. ಆ ಸಂದರ್ಭದಲ್ಲಿ ನಾನು ಮತ್ತು ನನ್ನ ತಂದೆ ಒಂದೇ ಮನೆಯಲ್ಲಿ ವಾಸವಿದ್ದೆವು. ದಾವಾ ಆಸ್ತಿಯು ನಮ್ಮ ಕುಟುಂಬದ ಆಸ್ತಿಯಾಗಿರುತ್ತದೆ. ಸದರಿ ಆಸ್ತಿ ನಮಗೆ ಪಾಲಿನಲ್ಲಿ ಬಂದಿರುತ್ತದೆ. ಪಾಲಾದ ನಂತರ ನಮ್ಮ ಕುಟುಂಬದ ಯಜಮಾನ ನನ್ನ ತಂದೆ. ನಮಗೆ ಮತ್ತು ನಮ್ಮ ತಂದೆಗೆ ಮನಸ್ತಾಪ, ಜಗಳ ಇದೆ. ನನ್ನ ವಿವಾಹವನ್ನು ನನ್ನ ತಂದೆ ಮಾಡಿಸಿದ್ದು, 2017 ರಲ್ಲಿ ವಿವಾಹವಾಗಿರುತ್ತದೆ. ನನ್ನ ತಂದೆ 8-9 ನೇ ತರಗತಿವರೆಗೆ ಓದಿರುತ್ತಾರೆ. ನನ್ನ ತಂದೆ ಕೃಷಿ ಮಾಡುತ್ತಿದ್ದರು. ಅವರಿಗೆ ಕೃಷಿ ಬಿಟ್ಟು ಬೇರೆ ಯಾವುದೇ ಉತ್ಪತ್ತಿ ಇರುವುದಿಲ್ಲ. ನನ್ನ ತಂದೆ ಮತ್ತು ನನ್ನ ಪಾಲಿಗೆ 3 ಎಕರೆ ತೋಟ ಇದೆ. 1 ಎಕರೆಯಲ್ಲಿ ಅಡಿಕೆ ಮರಗಳಿರುವುದಿಲ್ಲ, ಕಡಿದು ಮಾರಿರುತ್ತಾರೆ. 2 ಎಕರೆಯಲ್ಲಿ ಹಳೆಯ ಅಡಿಕೆ ಮರಗಳಿರುತ್ತವೆ. ಹಳೆಯ ಅಡಿಕೆ ಮರಗಳು ಸುಮಾರು 70-80 ಅಡಿ ಎತ್ತರ ಬೆಳೆಯುತ್ತವೆ ಎಂದರೆ ನನಗೆ ಗೊತ್ತಿಲ್ಲ. ಮಳೆಗಾಲದಲ್ಲಿ ಎಲೆಚುಕ್ಕೆ ರೋಗ ಬರುತ್ತದೆ, ಮುರಿದು ಬೀಳುತ್ತವೆ, ರೋಗ ಬರುತ್ತದೆ ಎಂದರೆ ಸರಿ. ಇದರಿಂದ ಗಣನೀಯವಾಗಿ ಕೃಷಿ ಉತ್ಪತ್ತಿ ಕುಂಠಿತವಾಗುತ್ತದೆ ಎಂದರೆ ಸರಿ. 2010ರಿಂದ 2019

PW : 1

ರವರೆಗೆ ಸದರಿ ತೋಟದಲ್ಲಿ ವಾರ್ಷಿಕ ಉತ್ಪತ್ತಿ ಎಷ್ಟು ಬರುತ್ತಿತ್ತು ಎಂದು ಗೊತ್ತಿಲ್ಲ. ಸದರಿ 2 ಎಕರೆಯಲ್ಲಿ ಎಷ್ಟು ಅಡಿಕೆ ಸಿಗುತ್ತಿತ್ತು ಎಂದು ನನಗೆ ಗೊತ್ತಿಲ್ಲ. ತೋಟದ ಕೆಲಸವನ್ನು ಯಾರೂ ಮಾಡುತ್ತಿರಲಿಲ್ಲ.

2016 ರಲ್ಲಿ ನನಗೆ 21 ವರ್ಷ ಪ್ರಾಯವಾಗಿತ್ತು. ತೋಟದ ಕೆಲಸವನ್ನು ನಾವು ಕುಟುಂಬದ ಯಾವ ಸದಸ್ಯರೂ ಮಾಡದೇ ಇದ್ದುದ್ದರಿಂದ ನನ್ನ ತಂದೆ ಮನೆಯ ಖರ್ಚಿಗೋಸ್ಕರ ಜಾಗ ಮಾರಾಟ ಮಾಡಲು ದಿಃ17.03.2016 ರಂದು ಕರಾರು ಮಾಡಿ, ಕರಾರಿನಲ್ಲಿ ತೋರಿಸಿದ ಮೊತ್ತವನ್ನು ಪಡೆದುಕೊಂಡಿರುತ್ತಾರೆ ಎಂದರೆ ಸರಿ. ಸದರಿ ಕರಾರು ಮಾಡಲು ನಾನು ನನ್ನ ತಂದೆಗೆ ಆಕ್ಷೇಪ ಮಾಡಿರುತ್ತೇನೆ. ಸದರಿ ಆಕ್ಷೇಪಣೆಯ ಬಗ್ಗೆ ಈ ಅರ್ಜಿ ಸಲ್ಲಿಸುವಾಗ ನಮ್ಮ ವಕೀಲರಿಗೆ ಹೇಳಿರುತ್ತೇನೆ. ಸದರಿ ಕರಾರನ್ನು ನಾನು ಮೊದಲ ಬಾರಿಗೆ 2025 ರಲ್ಲಿ ಆಕ್ಷೇಪಣೆ ಮಾಡಿರುತ್ತೇನೆ. ನನ್ನ ತಂದೆಗೆ ಕರಾರು ಮಾಡಬಾರದು ಮತ್ತು ಜಾಗವನ್ನು ಮಾರಾಟ ಮಾಡಬಾರದೆಂದು ವಕೀಲರ ಮೂಲಕ ನೋಟೀಸು ಕೊಟ್ಟಿರುತ್ತೇನೆ. ಸದರಿ ನೋಟೀಸ್ ನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುತ್ತೇವೆ.

ಈ ಪ್ರಕರಣವಲ್ಲದೇ ಇನ್ನೊಂದು ದಾವೆಯನ್ನು ನನ್ನ ತಂದೆಯ ವಿರುದ್ಧ ನಾವು 2013-14 ರಲ್ಲಿ ಸಲ್ಲಿಸಿರುತ್ತೇವೆ. ಸದರಿ ದಾವೆಯ ಬಗ್ಗೆ ಈ ಅರ್ಜಿಯಲ್ಲಿ ಹೇಳಿದ ಬಗ್ಗೆ ನೆನಪಿಲ್ಲ. ಸದರಿ ದಾವೆಯ ಸಂಖ್ಯೆ ಗೊತ್ತಿರುವುದಿಲ್ಲ. ಸದರಿ ದಾವೆಯಲ್ಲಿ ಈ ಕರಾರನ್ನು ಪ್ರಶ್ನಿಸಿರುವುದಿಲ್ಲ. ಈ ದಾವೆಯ ವಾದಿಯನ್ನು ಸದರಿ ದಾವೆಯಲ್ಲಿ ಪಕ್ಷಕಾರರನ್ನಾಗಿ ಮಾಡಿರುವುದಿಲ್ಲ. ಈ ಪ್ರಕರಣ ಇರುವ ಬಗ್ಗೆ ಆದಾವೆಯಲ್ಲಿ ಹೇಳಿರುವುದಿಲ್ಲ. ಸದರಿ ದಾವೆ ತೀರ್ಪಿಗೆ ಬಾಕಿ ಇರುತ್ತದೆ. ಬೇರೆ ಡಿಕ್ರೀಯನ್ನು ರದ್ದು ಮಾಡುವಂತೆ ಮಿಸ್ ಕೇಸ್ ಅರ್ಜಿಯನ್ನು ಡಾ. ರವಿ ನಾರಾಯಣ ಎಂಬುವವರ ವಿರುದ್ಧ ನಾನಾಗಲೀ/ನನ್ನ ತಂಗಿಯರಾಗಲೀ ಸಲ್ಲಿಸಿರುವುದಿಲ್ಲ. ಡಾ. ರವಿ ನಾರಾಯಣ ಎಂಬುವವರ ವಿರುದ್ಧ ನಾನು ಈ ದಾವೆಗೆ ಸಂಬಂದಪಟ್ಟ ಜಾಗವನ್ನೂ ಸೇರಿಸಿ ಪ್ರಕರಣ ಹೂಡಿರುತ್ತೇನೆ. ಅದೂ ಕೂಡಾ ತೀರ್ಪಿಗೆ ಬಾಕಿ ಇದೆ. ನನ್ನ ತಂದೆಯವರ ವಿರುದ್ಧ ಮನಿ ಡಿಕ್ರೀ ಮಾಡಿಕೊಂಡ

PW : 1

ಬಗ್ಗೆ ಗೊತ್ತಿರುತ್ತದೆ. ಸದರಿ ಡಿಕ್ರೀಯಲ್ಲಿ ದಾವಾ ಜಾಗವನ್ನು ನ್ಯಾಯಾಲಯದ ಮೂಲಕ ಹರಾಜು ಆದ ಬಗ್ಗೆ ಗೊತ್ತಿದೆಯಾ ಎಂದರೆ ಹರಾಜಾಗಿಲ್ಲ, ನೋಟೀಸ್ ಆಗಿರುತ್ತದೆ. ಅಮಲ್ಜಾರಿ ಸಂಖ್ಯೆ ಗೊತ್ತಿಲ್ಲ. ಅದರಲ್ಲಿ ನಾನು ನ್ಯಾಯಾಲಯಕ್ಕೆ ಹಾಜರಾಗಿರುವುದಿಲ್ಲ. ಈ ಡಿಕ್ರೀ ಇರುವ ಕಾರಣ ಅಮಲ್ಜಾರಿಯಲ್ಲಿ ಈ ದಾವೆಯ ವಾದಿ ಏಲಂ ಮಾಡಬಾರದು ಎಂದು ಅರ್ಜಿ ಸಲ್ಲಿಸಿದ ಬಗ್ಗೆ ಗೊತ್ತಿಲ್ಲ. ಏಲಂ ಮಾಡಬಾರದೆಂದು 2019 ರಲ್ಲಿ ಅರ್ಜಿ ಸಲ್ಲಿಸಿರುತ್ತಾರೆ. ಆ ರೀತಿ ಅರ್ಜಿ ಸಲ್ಲಿಸಲು ನಾನು ಯಾವುದೇ ಮಾಹಿತಿ ನೀಡಿರುವುದಿಲ್ಲ. ನನಗೆ ವಾದಿಯ ಪರಿಚಯ ಇದೆ. ಪಾಲುಪಟ್ಟಿಯಲ್ಲಿ ನನ್ನ ರಕ್ಷಕನಾಗಿ ನಮ್ಮ ತಂದೆ ಪಾಲು ಪಡೆದಿರುತ್ತಾರೆ ಎಂದರೆ ಸರಿ. ನಮ್ಮ ತಂದೆ ರಕ್ಷಕನಾಗಿ ಮುಂದುವರೆಯಬಾರದೆಂದು ನನ್ನ/ನನ್ನ ತಂಗಿಯರ ಪರವಾಗಿ ದಾವೆಯನ್ನು ಹಾಕಿರುವುದಿಲ್ಲ.

**ಮುಂದುವರೆದ ಪಾಟೀಸವಾಲಿಗೆ ಮುಂದೂಡಲಾಯಿತು.**

ನನ್ನ ಉಕ್ತಲೇಖನದ ರೀತ್ಯಿ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.

ಓ.ಹೇ.ಕೇ.ಸ. ಇದೆ

ಪ್ರಧಾನ ಹಿರಿಯ ವ್ಯವಹಾರಿಕ ನ್ಯಾಯಾಧೀಶರು, ಪುತ್ತೂರು